# ವಿವಾಹ ದೀಕ್ಷೆ

ಗಂಡು ಹೆಣ್ಣುಗಳ ನಡುವೆ ಶಾರೀರಿಕ ಆಕರ್ಷಣೆ ಎಂಬುದು ಈ ಭೂಮಿಯ ಮೇಲೆ ಬದುಕಿನ ಸಾತತ್ಯವನ್ನು ಸಾಧಿಸಲು ನಿಸರ್ಗ ರೂಪಿಸಿರುವ ಒಂದು ತಂತ್ರ. ಮನುಷ್ಯನಲ್ಲಿ ಈ ಆಕರ್ಷಣೆ ಕೇವಲ ದೈಹಿಕವಾಗಿ ಉಳಿಯದೆ, ಭಾವನಾತ್ಮಕ ಆಯಾಮವನ್ನೂ ಪಡೆದುಕೊಂಡಿದೆ. ಮನುಷ್ಯ ಜಗತ್ತಿನಲ್ಲಿ ಗಂಡು ಹೆಣ್ಣುಗಳ ಸಂಬಂಧ ಮೊದಮೊದಲು ಪಶುಪಕ್ಷಿಗಳಲ್ಲಿರುವಂತೆ ಇಂದ್ರಿಯಗಳ ಹಂತದಲ್ಲಿಯೇ ಇದ್ದಿತ್ತಾದರೂ, ಮನುಷ್ಯ ಪ್ರಾಕೃತಿಕ ಸ್ಥಿತಿಯಿಂದ ಮೇಲೇರುತ್ತಾ ಬಂದಂತೆಲ್ಲಾ ಲೈಂಗಿಕ ಸಂಬಂಧಕ್ಕೊಂದು ವ್ಯವಸ್ಥಿತ ಆಕೃತಿ ಪ್ರಾಪ್ತವಾಯಿತು. ಹೆಣ್ಣು ಗಂಡುಗಳ ಸಮ್ಮಿಲನದ ಫಲಿತಾಂಶವಾದ ಸಂತಾನವನ್ನು ಕುರಿತು ವಾತ್ಸಲ್ಯ, ಸಂತಾನಕ್ಕೆ ಕಾರಣಳಾದ ಅಥವಾ ಕಾರಣನಾದ ಸಂಗಾತಿಯ ಬಗೆಗೆ ಪ್ರೀತಿ, ಸಂತಾನವನ್ನು ಕಾಪಾಡಿ ಬೆಳೆಸುವ ಪ್ರಕ್ರಿಯೆಯಲ್ಲಿ ಸಿಗುವ ಸಂತೋಷ– ಇತ್ಯಾದಿ ಭಾವಗಳು ಶಾರೀರಿಕ ಸಂಬಂಧದ ಸುತ್ತ ಬೆಳೆಯುತ್ತಾ ಕುಟುಂಬದ ಕಲ್ಪನೆ ಸಾಕಾರಗೊಳ್ಳುವಂತಾಯಿತು. ಆದ್ದರಿಂದಲೇ ಮನುಷ್ಯನಿಗೆ ನಿಲ್ಲಲೊಂದು ನೆಲೆ, ಬದುಕಲೊಂದು ದಾರಿ, ಜೀವನಕ್ಕೊಂದು ಉದ್ದೇಶ ಬೇಕೆನ್ನಿಸಿತು. ಹೀಗಾಗಿ ಅಲೆಮಾರಿಯಾಗಿದ್ದ ಮನುಷ್ಯ 'ಗೃಹಸ್ಥ'ನಾದ; ಆತನ ಸಂಗಾತಿ 'ಗೃಹಿಣಿ' ಎನ್ನಿಸಿಕೊಂಡಳು. ಇಂಥ ಕುಟುಂಬ ಜೀವನ ವ್ಯಕ್ತಿಗಳ ಪಾಲಿಗೆ ಸ್ಥಿರತೆ ಹಾಗೂ ಸುರಕ್ಷಿತತೆಯ ಭಾವವನ್ನು ತಂದುಕೊಟ್ಟಿತು. ಕುಟುಂಬ ಕುಟುಂಬಗಳ ಸಮುದಾಯಗಳಿಂದ ಸಮಾಜ, ರಾಷ್ಟ್ರ ಮುಂತಾದವು ಅಸ್ತಿತ್ವಕ್ಕೆ ಬರುವಂತಾಯಿತು. ಹೆಣ್ಣಿನ ಕಾರಣಕ್ಕಾಗಿಯೇ ವ್ಯಕ್ತಿ ವ್ಯಕ್ತಿಗಳ ನಡುವೆ ಘರ್ಷಣೆ ರಕ್ತಪಾತ ನಡೆದು, ಸಾಮೂಹಿಕ ಶಾಂತಿ ಕದಡಬಾರದೆಂಬ ಉದ್ದೇಶದಿಂದ ವಿವೇಕಿಗಳು ವಿವಾಹವೆಂಬ ವ್ಯವಸ್ಥೆಯನ್ನು ರೂಢಿಗೆ ತಂದರು. ವಿವಾಹ ದೀಕ್ಷೆಗೆ ಬದ್ಧರಾಗಿ ಬಾಳುವ ದಂಪತಿಗಳಿಂದ ಸಮಷ್ಟಿಯ ಹಿತ, ವ್ಯಷ್ಟಿಯ ಸಂತೋಷ– ಎರಡೂ ಘಟಿಸುತ್ತವೆ ಎಂಬ ಸತ್ಯವನ್ನು ನಮ್ಮ ಹಿರಿಯರು ಕಂಡುಕೊಂಡಿದ್ದರು.

ಜಗತ್ತಿನ ಹಲವು ಸಮುದಾಯಗಳಲ್ಲಿ ವಿವಾಹವೆಂಬುದು ಕೇವಲ ಲೌಕಿಕ ಪ್ರಕ್ರಿಯೆಯಲ್ಲ; ಅದೊಂದು ಧಾರ್ಮಿಕ ಕ್ರಿಯೆಯೂ ಹೌದು. ಭಾರತೀಯ ಸಮಾಜದಲ್ಲಿ ವಿವಾಹವನ್ನು ಷೋಡಶ ಸಂಸ್ಕಾರಗಳಲ್ಲಿ ಪ್ರಮುಖವಾಗಿರುವ ಒಂದು ಸಂಸ್ಕಾರವೆಂದು ಪರಿಗಣಿಸಲಾಗಿದೆ. ಭಾರತೀಯ ಸಂಸ್ಕೃತಿ ಆಶ್ರಮ ಧರ್ಮಗಳಲ್ಲಿ ಗೃಹಸ್ಥಾಶ್ರಮಕ್ಕೆ ದ್ವಿತೀಯ ಸ್ಥಾನದ ಪ್ರಾಶಸ್ತ್ಯವನ್ನು ಕೊಟ್ಟಿರುವುದಲ್ಲದೆ, 'ಧನ್ಯೋ ಗೃಹಸ್ಥಾಶ್ರಮಃ' ಎಂದೂ ಕೀರ್ತಿಸಿದೆ. ಗಂಡು ಹೆಣ್ಣುಗಳು ವಿವಾಹಿತರಾಗಿ 'ದಂಪತಿ' ಎನ್ನಿಸಿಕೊಂಡು, ಸತ್ಸಂತಾನವನ್ನು ಪಡೆದು, ಪಿತೃಋಣ, ಸಮಾಜ ಋಣಗಳನ್ನು ತೀರಿಸಬೇಕೆಂಬುದು ವಿವಾಹ ಸಂಸ್ಕಾರದ ಹಿಂದಿರುವ ಉದ್ದೇಶ. ಗಂಡು ಹೆಣ್ಣುಗಳ ನಡುವಣ ಸಂಬಂಧಕ್ಕೆ ಧಾರ್ಮಿಕ, ಸಾಮಾಜಿಕ ಹಾಗೂ ನೈತಿಕ ಸಮ್ಮತಿ ದೊರೆಯುವುದು ವಿವಾಹ ಸಂಸ್ಕಾರದಿಂದ. ಇಂಥ ಸಾಂಪ್ರದಾಯಿಕ ವಿವಾಹಕ್ಕೆ ಪಾರಂಪರಿಕ ಶ್ರದ್ಧೆ ನಂಬಿಕೆಗಳ ಒತ್ತಾಸೆಯಿರುತ್ತದೆ; ಹಿರಿಯರ ಶುಭ ಹಾರೈಕೆಗಳಿರುತ್ತವೆ; ಬಂಧು ಮಿತ್ರರ ಸಡಗರ, ಸಂಭ್ರಮ, ಉಲ್ಲಾಸ ಉತ್ಸಾಹಗಳ ಹಿನ್ನೆಲೆಯಿರುತ್ತದೆ. ವಿವಾಹ ದೀಕ್ಷೆಗೆ ಒಳಗಾದ ದಂಪತಿಯಲ್ಲಿ ಪ್ರಿಯ ಪ್ರತೀಕ್ಷೆಗಳು ಹುಟ್ಟಿಕೊಳ್ಳಲು ಇವೆಲ್ಲವೂ ಕಾರಣವಾಗುತ್ತವೆ.

ಕಾಳಿದಾಸ ಮಹಾಕವಿ ಗೃಹಸ್ಥಾಶ್ರಮವನ್ನು ಕುರಿತು 'ಪ್ರಜಾಯೈ ಗೃಹಮೇಧಿನಾಂ' (ಸಂತಾನಕ್ಕಾಗಿ ಗೃಹಸ್ಥಾಶ್ರಮ) ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆತನ ದೃಷ್ಟಿಯಲ್ಲಿ ವಿವಾಹವೆಂಬುದು ಒಂದು ಯಜ್ಞ, ಆ ಯಜ್ಞದಲ್ಲಿ ಗಂಡು ಹೆಣ್ಣುಗಳಿಬ್ಬರೂ ಸ್ವ ಸಂತೋಷದಿಂದ ತಮ್ಮ ವೈಯಕ್ತಿಕತೆಯನ್ನೂ, ಪ್ರತ್ಯೇಕತೆಯನ್ನೂ ಆಹುತಿಯಾಗಿ ಅರ್ಪಿಸುತ್ತಾರೆ; ವೈಯಕ್ತಿಕ ಬೇಕು ಬೇಡಗಳನ್ನು ಬದಿಗೆ ಸರಿಸಿ, ಸಹಬಾಳ್ವೆಯ ಹಿತಕ್ಕೆ ಆದ್ಯತೆಯನ್ನು ಕೊಡುತ್ತಾರೆ; ವ್ಯಕ್ತಿ ವಿಶಿಷ್ಟತೆಗಳ ತ್ಯಾಗದ ಮೂಲಕ ಸಾಮರಸ್ಯವನ್ನು ಸಾಧಿಸುತ್ತಾರೆ. ಸಂಗಾತಿಗಳಲ್ಲಿನ 'ನಾನು ತನ' ಹಿಂದೆ ಸರಿದು 'ನಾವು ತನ'ದ ಭಾವ ಮೂಡಬೇಕಾದುದು ವಿವಾಹಯಜ್ಞದ ನಿಜವಾದ ಗುರಿ. ಆದ್ದರಿಂದ ವಿವಾಹವೆಂಬುದು ಗಂಡು ಹೆಣ್ಣುಗಳ 'ಸಂಯೋಗ' ಮಾತ್ರವಲ್ಲ; ಅದೊಂದು 'ಸಮ–ಗುಣ–ಯೋಗ.'

ಆದರೆ ಇತ್ತೀಚಿನ ದಿನಗಳಲ್ಲಿ ಭಾರತೀಯ ಸಮಾಜದಲ್ಲಿ ವಿವಾಹ ವ್ಯವಸ್ಥೆ ತೀವ್ರವಾಗಿ ಶಿಥಿಲಗೊಳ್ಳುತ್ತಿರುವುದು ನಿಜಕ್ಕೂ ಒಂದು ದುರಂತ. ಸ್ವಪ್ರತಿಷ್ಠೆ, ಅಹಂಕಾರ, ಆರ್ಥಿಕ ಸ್ವಾತಂತ್ರ್ಯದ ಹಂಬಲ, ಸ್ವಾರ್ಥ ಪ್ರವೃತ್ತಿ, ಸ್ವೈರ ಮನೋಧರ್ಮ, ಬೇಜವಾಬ್ದಾರಿತನ, ಪರಸ್ಪರರನ್ನು ಕುರಿತು ಗೌರವದ ಅಭಾವ, ಕೌಟುಂಬಿಕ ಸಮಸ್ಯೆ, ದೂರದೃಷ್ಟಿಯ ಕೊರತೆ– ಇಂಥ ಹತ್ತು ಹಲವು ಸಂಗತಿಗಳು ವಿವಾಹಿತರ ನಡುವೆ ಬಿರುಕು ಕಾಣಿಸಿಕೊಳ್ಳಲು ಕಾರಣವಾಗಿ, ವಿಚ್ಛೇದನಗಳಲ್ಲಿ ಪರ್ಯವಸಾನಗೊಳ್ಳುತ್ತಿವೆ. ಮನೋ ವಿಜ್ಞಾನಿಗಳೂ, ಸಮಾಜ ವಿಜ್ಞಾನಿಗಳೂ, ಚಿಂತಕರೂ ಗಮನ ಕೊಡಲೇಬೇಕಾಗಿರುವ ಗಂಭೀರ ವಿಚಾರಗಳಲ್ಲಿ ನಮ್ಮಲ್ಲಿ ಹೆಚ್ಚುತ್ತಿರುವ ವಿಚ್ಛೇದನ ಪ್ರಕ್ರಿಯೆಯೂ ಒಂದು ಎನ್ನುವುದರಲ್ಲಿ ಸಂಶಯವಿಲ್ಲ.

■ ವೈನತೇಯ

# ಮಾತೇ ಮುತ್ತು

★ 'ಮೈಥುನ' ಪುರುಷ ಮತ್ತು ಸ್ತ್ರೀ ಮಧ್ಯೆ ಮಾತ್ರವಲ್ಲ. ಸೂರ್ಯ ಮತ್ತು ಚಂದ್ರರ ನಡುವೆ, ಭೂಮಿ ಮತ್ತು ಬಾನಿನ ನಡುವೆ, ನಕ್ಷತ್ರ ಮತ್ತು ಮೋಡಗಳ ನಡುವೆ ಇರುತ್ತದೆ. ಆದ್ದರಿಂದಲೇ ಪ್ರಪಂಚ ಚೈತನ್ಯಯುಕ್ತವಾದುದು.

–ಎಸ್.ಜಿ.ವಾಸುದೇವ

★ ನಾಯಕನಾಗುವುದಕ್ಕೆ ಆಂತರಿಕ ಸಂಪತ್ತು, ಘನತೆ ಇರಬೇಕು. ಸಂಕೋಚವನ್ನು ಬಿಟ್ಟು ಮುಂದೆ ಬಂದು ಮಾತನಾಡುವ, ಪ್ರತಿನಿಧಿಸುವ ಶಕ್ತಿ ಬೇಕು. ಎಲ್ಲರ ಮನವೊಲಿಸುವ ಜಾಣ್ಮೆ, ಕಲೆ ಬೇಕು.

–ಪಿ.ಲಂಕೇಶ್

★ ಎಲ್ಲಕ್ಕೂ ಶಾಸ್ತ್ರೀಯವಾದ ಔಷಧ ಇದೆ, ಮೂರ್ಖನಿಗೆ ಮಾತ್ರ ಇಲ್ಲ.

–ಭರ್ತೃಹರಿ

★ ಎಷ್ಟೋ ಬಾರಿ 'ಆಡಿದ ಮಾತಿ'ಗಾಗಿ ಪಶ್ಚಾತ್ತಾಪ ಪಟ್ಟಿದ್ದೇನೆ. 'ಮೌನ'ದಿಂದ ಇದ್ದುದಕ್ಕಾಗಿ ಎಂದೂ ಪಶ್ಚಾತ್ತಾಪ ಪಟ್ಟಿಲ್ಲ.

–ಪಬ್ಲಿಯಸ್ ಸೈರಸ್

★ ಯಾವಾಗಲೋ ನೌಕರರನ್ನೇ ಮುಂದೆ ಮಾಡಿ ತಾನು ಹಿಂದೆ ಉಳಿಯುವ ಯಜಮಾನನು ಎಷ್ಟು ದಿನ ತನ್ನ ಯಜಮಾನ್ಯವನ್ನು ಕಾಯ್ದುಕೊಳ್ಳುವನೋ ನಾವು ಅರಿಯೆವು.

–ಗಳಗನಾಥ

★ ಸುಶೀಲೆಯರಾದ ಸ್ತ್ರೀಯರ ಮೇಲೆ ಯಾರು ಆರೋಪ ಹೊರಿಸುತ್ತಾರೋ ಮತ್ತು ನಾಲ್ಕು ಮಂದಿ ಸಾಕ್ಷಿದಾರರನ್ನು ಅವರು ತರುವುದಿಲ್ಲವೋ, ಅವರಿಗೆ ಎಂಬತ್ತು ಬಾರೇಟುಗಳನ್ನು ಹೊಡೆಯಿರಿ. ಅವರ ಸಾಕ್ಷ್ಯವನ್ನು ಸ್ವೀಕರಿಸಬೇಡಿ. ಅವರೇ ಧರ್ಮಭ್ರಷ್ಟರು.

–ಕುರಾನ್

★ ಮೋಸ ಮಾಡಿದವನಿಗೆ ಮೋಸ ಮಾಡುವುದರಲ್ಲಿ ಇಮ್ಮಡಿ ಸಂತೋಷವಿದೆ.

–ಲಾ.ಫಾಂಟೇನ್

★ ನಾವಾಗಿ ಯುದ್ಧಕ್ಕೆ ನುಗ್ಗುವುದು ಬೇಡ. ಯುದ್ಧ ತಾನಾಗಿ ಬಂದು ನಮ್ಮ ಮೇಲೆ ಬಿದ್ದಲ್ಲಿ ಅದನ್ನು ಕಳೆದುಕೊಳ್ಳುವುದು ಬೇಡ.

–ಜಿ.ಪಿ.ರಾಜರತ್ನಂ

★ ಸ್ವದೇಶಕ್ಕಾಗಿ ಸಾಯುವುದು ಮಧುರವಾದುದೆಂದು ಹಿಂದಿನವರು ಬರೆದರು. ಆಧುನಿಕ ಯುದ್ಧ ಸಾವಿನಲ್ಲಿ ಮಧುರವಾದುದೇನೂ ಇಲ್ಲ. ಯಾವ ಒಳ್ಳೆಯ ಕಾರಣವೂ ಇಲ್ಲದೆ ಸಾಯಬೇಕು.

–ಅರ್ನೆಸ್ಟ್ ಹೆಮಿಂಗ್‌ವೇ

★ಇತರರ ಮಟ್ಟಕ್ಕೆ ತಾನೇ ಇಳಿದುಬಂದು, ಅವರಿಗೇ ಗೊತ್ತಾಗದಂತೆ ಅವರನ್ನು ನಿಧಾನವಾಗಿ ಮೇಲಕ್ಕೆತ್ತಬಲ್ಲವನೇ ನಿಜವಾದ ಯೋಗಿ.

–ಸ್ವಾಮಿ ರಂಗನಾಥಾನಂದ

★ ರತ್ನವನ್ನು ಇತರರು ಹುಡುಕಿಕೊಂಡು ಬರುವರೇ ಹೊರತು, ರತ್ನವೇ ಇತರರನ್ನು ಹುಡುಕಿಕೊಂಡು ಹೋಗುವುದಿಲ್ಲ.

–ಕಾಳಿದಾಸ

★ ಹೇಸಿಗೆ ಕಂಡರೆ ದೂರ ಇರುವುದೇ ಒಳಿತು. ಚೀಃ... ತುಃ... ಎನ್ನುತ್ತ ಅದರ ಮೇಲೆ ಕಲ್ಲು ಎಸೆದರೆ ಅದು ಮುಖಕ್ಕೆ ಸಿಡಿಯುತ್ತದೆ.

–ಗಾದೆ